ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಬಿ. ರಾಚಯ್ಯ.—ಆ ಕಾಲೇಜುಗಳಲ್ಲಿ ಸಹ ಸರ್ಕಾರಿ ಕಾಲೇಜುಗಳಂತೆ ಫೀಜನ್ನು ಕೇಳದ ಹಾಗೆ ಅಡ್ಜಿಟ್ ಮಾಡಿಕೊಳ್ಳುವಂತೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲಿ. ಅದನ್ನು ನೋಡುತ್ತೇನೆ.

Service Weightage for Teachers while fixing initial pay in 1947.

Q.—577. **Sri S. R. NAGAPPA SETTY** (Shimoga).—

Will the Government be pleased to state :—

(*a*) whether it has come to their notice that certain teachers who had put in some years of service and whose names were enlisted by the C.R.B. were denied the service weightage for the reason that they had break of service at the time of fixing the initial pay under the re-allocation of 1947 :

(*b*) whether the C.R.B. candidates were appointed according to their seniority when they were first appointed as teachers ;

(*c*) whether the break of service to some of them was condoned and they were granted increments and service weightage ?

A.—**Sri A. G. RAMACHANDRA RAO** (Minister for Law and Education).—

(*a*) No such case is reported so far. For purpose of service weightage only continuous service, excluding the preceding broken periods, if any, is taken into account.

(*b*) Yes.

(*c*) This does not arise in view of reply to clause (*a*) above.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಸಿ. ಆರ್. ಬಿ. ಯಿಂದ ಅಪಾಯಿಂಟಾಗಿ ಬಂದಿರತಕ್ಕವರ ಪೈಕಿ ಕೆಲವು ಉಪಾಧ್ಯಾಯರನ್ನು ಬ್ರೇಕ್ ಆಫ್ ಸರ್ವೀಸ್ ಎಂದು ಹೇಳಿ ಕೆಲಸದಿಂದ ತೆಗೆದು ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಅವರಿಗೆ ಅಫೀಸಿನಿಂದ ಅಪಾಯಿಂಟ್‌ಮೆಂಟ್ ಆರ್ಡರನ್ನು ಕಳುಹಿಸುವಾಗ್ಗೆ ಒಂದು ಸಲ ಮುಗಿದು ಹೋದನಂತರ ಮತ್ತೊಂದು ಅಪಾಯಿಂಟ್‌ಮೆಂಟನ್ನು ತೆಗೆದು ಕೊಳ್ಳುವ ಮಧ್ಯೆ 8 ದಿವಸಗಳ ಬ್ರೇಕ್ ಆಫ್ ಸರ್ವೀಸ್ ಆಗಿದ್ದರೆ ಅಂಥಾದ್ದನ್ನು ಕಂಡೋನ್ ಮಾಡಿ ಸರ್ವೀಸನ್ನು ಕೂಡಿಸಿ ಕೊಡುವಂತೆ ಏರ್ಪಾಡು ಮಾಡುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ಏಮರ್ಶೆ ಮಾಡುತ್ತೇನೆ.

ಶ್ರೀ ಎಸ್. ಆರ್ ನಾಗಪ್ಪ ಶೆಟ್ಟಿ.—2-3 ವರ್ಷಗಳ ಪೇಲ್ಪಟ್ಟು ಸರ್ವೀಸಾಗಿದ್ದರೂ ಮಧ್ಯೆ ಎಲ್ಲೋ 4-5 ದಿವಸಗಳ ಬ್ರೇಕ್ ಬಂದುದಕ್ಕಾಗಿಯೇ ಅಂಥವರಿಗೆಲ್ಲಾ 1-1-47ರಲ್ಲಿ ಆದ ಅಲೋಕೇಷನ್ ಪಟ್ಟಿಯಲ್ಲಿ ಯಾವ ವಿಧವಾದ ವೈಚೇಜೂ ಇಲ್ಲದಂತೆ ಕೈ ಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಉತ್ತರ ಕೊಟ್ಟಿದ್ದೇನೆ ಈ ನಿಮ್ಮ ಪ್ರಶ್ನೆಗೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸ್ವಾಮಿ, ಈ ಸಿ. ಆರ್. ಬಿ. ಲಿಸ್ಟಿನ ಪ್ರಕಾರ ಅಪಾಯಿಂಟ್‌ಮೆಂಟ್‌ಗಳನ್ನು ಕೊಡುವಾಗ ಪಟ್ಟಿಯಲ್ಲಿ ಯಾರಾರ ಹೆಸರು ಮೇಲಿರುತ್ತದೆಯೋ ಅಂಥವರಿಗೆಲ್ಲಾ ಬ್ರೇಕ್ ಆಫ್ ಸರ್ವೀಸ್ ಆಗುವಂಥ ಲೀನುಗಳನ್ನು ತೋರಿಸಿ, ಪಟ್ಟಿಯ ಕೊನೆಯಲ್ಲಿರತಕ್ಕವರಿಗೆ ಖಾಯಂ ಕೆಲಸ ದೊರೆಯುವಂತೆ ಮಾಡುತ್ತಿದ್ದಾರೆ; ಹೀಗಾಗಬಾರದು. ಇಂಥಾದ್ದನ್ನು ತಾವು ಸರಿಪಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನಾಗಲೇ ಹೇಳಿದ ಉತ್ತರವನ್ನೇ ಈಗಲೂ ಹೇಳಬೇಕಾಗುತ್ತದೆ.

Mavinahalli Middle School.

Q.—630. **Sri C. M. ANNAIYAPPA** (Gubbi).—

Will the Government be pleased to state :—

(*a*) the number of years that have elapsed since the time the villagers of Mavinahalli Chandrasekharapura Hobli, Gubbi Taluk, Tumkur District, deposited the amount for the construction of the Middle School and for the site ;

(*b*) whether the said school is running in a Government building or in a private building ;

(*c*) how many years have elapsed since the proposal from the District Educational Officer, Tumkur District, was made for the establishment of a Central Middle School near the temple of Kalagattamma at Nagasandra, Kasba Hobli, Gubbi Taluk ?

A.—**Sri A. G. RAMACHANDRA RAO** (Minister for Law and Education).—

(*a*) Six years.

(*b*) The school is running in a private building.

(*c*) Proposal from the District Educational Officer, Tumkur, for sanction of a *Pucca* Middle School at Nagasandra was received on 12-5-1953.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ನಾಗಸಂದ್ರದ ಮಿಡಲ್‌ಸ್ಕೂಲನ್ನು ತಾವೀಗ ಮಂಜೂರುಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಈಗ ತಾನೆ ಪರಿಶೀಲನೆಗಾಗಿ ಬಂದಿದೆ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಸರ್ಕಾರಿ ಇಲಾಖಾ ಅಧಿಕಾರಿಗಳೇ ಇದು ಬಹಳ ಪ್ರಾಮುಖ್ಯವಾದ ಸ್ಕೂಲು ಎಂಬುದಾಗಿ ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಾಗ್ಯೂ 3-4 ವರ್ಷಗಳಾದರೂ ಇನ್ನೂ ಮಂಜೂರುಮಾಡದಿರಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರ ವರದಿ ನಮಗೆ ಬಂದಿರುವುದು ತಾ 12-5-1953 ರಲ್ಲಿ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಈ ವರ್ಷವೇ ಅದನ್ನು ಮಂಜೂರುಮಾಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಮಾವಿನಹಳ್ಳಿ ಮಿಡಲ್‌ಸ್ಕೂಲಿನ ಕಟ್ಟಡಕ್ಕಾಗಿ ಠೇವಣಾತಿ ಕೊಟ್ಟಿದ್ದರೂ ಕಟ್ಟಡ ಏತಕ್ಕೆ ಇನ್ನೂ ಆಗಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಅದನ್ನೂ ಈ ವರ್ಷವೇ ಮಂಜೂರುಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗುವುದಿಲ್ಲ. ಆ ಬಗ್ಗೆ ಬಂದಿರತಕ್ಕ ಠೇವಣಾತಿ 1,300 ರೂಪಾಯಿಗಳು ಮಾತ್ರ. ಆದರೆ ಇದಕ್ಕಿಂತಲೂ ಪ್ರಾಮುಖ್ಯವಾದ ಪಾಠಶಾಲೆಗಳು ಇನ್ನೂ ಬಹಳವಾಗಿರುವುದರಿಂದ ಇದನ್ನು ಸದ್ಯಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಠೇವಣಾತಿ ಇಲ್ಲದೇ ಇದ್ದಂಥ ಕಟ್ಟಡಗಳು ಯಾವುವನೂ ತಾವು ಈವರೆಗೆ ಕೈಗೊಂಡಿರುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೈಗೊಂಡಿರಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಠೇವಣಾತಿ ಇಟ್ಟಿರುವುದು ಕಡಮೆ ಎನ್ನುವಹಾಗೆ ತಾವೀಗ ಮಾತನ್ನಾಡಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹುಡುಗರ ಸಂಖ್ಯೆ ಮತ್ತು ಠೇವಣಾತಿ ಇತ್ಯಾದಿ ನಾನಾ ವಿಷಯಗಳಿಗೆ ಗಮನಕೊಡಬೇಕಾಗಿರುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನಲ್ಲಿ ಠೇವಣಾತಿಯೂ ಇಲ್ಲದೆ ಕೇವಲ 80 ಜನ ಹುಡುಗರಿರುವಂಥ ಪಾಠಶಾಲೆಗೆ ನೀವು ಪ್ರಯಾರ್ಟಿ ಕೊಟ್ಟಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದೆಂದು ನಾನು ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಸಿದ್ದಯ್ಯ.—ಹಣವನ್ನು ಡಿಪಾಜಿಟ್ ಮಾಡಿರತಕ್ಕ ಸ್ಕೂಲುಗಳ ಕಟ್ಟಡವನ್ನಾದರೂ ತಾವು ಜಾಗ್ರತೆ ಮಾಡಿಸಲು ಏರ್ಪಡಿಸುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಡಿಪಾಜಿಟ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, 500 ರೂಪಾಯಿಗಳಿಂದ ಹಿಡಿದು, ಒಂದು ಸಾವಿರ, ಎರಡು ಸಾವಿರ ಹೀಗೆಲ್ಲಾ ಭಿನ್ನಭಿನ್ನವಾಗಿರುತ್ತವೆ. ಅಲ್ಲದೆ ಅಲ್ಲಿನ ಪಾಠಶಾಲೆಯ strength ಏನಿರುತ್ತದೆ ಏನು ಎಂಬ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚಿಸದೆ off-hand ಆಗಿ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಜನರಿಗೆ ವಿದ್ಯಾಭ್ಯಾಸದ ವಿಷಯದಲ್ಲಿ ತೊಂದರೆಯಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಸಂದರ್ಭ ಬಂದಾಗ ಅದನ್ನು ಪರಿಶೀಲನೆ ಮಾಡಲಾಗುವುದೆಂದು ಆಗಲೇ ತಿಳಿಸಿದ್ದೇನೆ.

Mr. SPEAKER.—Questions Nos. 203, 308, and 839 are of a similar nature and may be taken up together.

Amildari List

Q.—203. **Sri G. SIVAPPA** (Holalkere).—

Will the Government be pleased to state :—

(*a*) present rules governing the preparation of eligibility list for Amildars ;

(*b*) who will prepare the list ;

(*c*) whether there is a likelihood of preparing such a list ?

A.—**Sri Kadidal MANJAPPA** (Minister for Revenue and Public Works).—

(*a*) The rules governing the preparation of the eligibility list of Amildars are contained in G.O. No. R. 6308-67—L. R. 353-33-5, dated 26th June 1934. A copy placed on the Table of the House. (Placed in the Legislature Library *vide* No. 13—L.A. of 1954.)

(*b*) The Public Service Commission will prepare the list.

(*c*) Yes.

Q.—308. **Sri M. MADIAH** (Nanjangud—Scheduled Castes).—

Will the Government be pleased to state :—

(*a*) the number of officials proposed or decided to be included in the Amildari List under preparation by the State Public Service Commission ;

(*b*) the method of selection of these officials to be included in the Amildari List ;

(*c*) whether there is any Government Order passed in this behalf for selection of these candidates to be included in the Amildari List (a copy of the Government Order, if any, may kindly be furnished) ;

(*d*) the total number of communitywar applications received in the Office of the Public Service Commission from the officials of each community in